





300ರಷ್ಟು ವಿಧದ ಅಪರೂಪದ ಹಕ್ಕಿಗಳೂ ಗಣತಿಯಲ್ಲಿ ಕಂಡುಬಂದವು.

ಕಾಡಿನೊಳಗೆ ಹಲವು ಹಲವು ಜನವಸತಿಗಳು, ಹೊಲಗದ್ದೆಗಳು, ಹೆದ್ದಾರಿಗಳು, ರೈಲು ಹಳಿಗಳು ಹಾದು ಹೋಗಿವೆ. ಪರಿಣಾಮವಾಗಿ ವನ್ಯಜೀವಿ ಸಂಕುಲಕ್ಕೆ ಜೀವಬೆದರಿಕೆ ಹೆಚ್ಚಾಗಿದೆ. ಹಿರಣ್, ಸರಸ್ವತಿ, ದಟಾರದಿ, ಶಿಂಗೊಡ, ಮಚ್ಛುಂದ್ರಿ, ಗೋದಾವರಿ, ರಾವಲ್ ನದಿಗಳು ಇಲ್ಲಿನ ಜೀವನಾಡಿಗಳಾದರೂ ಇವು ಬೇಸಿಗೆಯಲ್ಲಿ ಬತ್ತಿ ಹೋಗುತ್ತವೆ. ಸಿಂಹಗಳ ದಾಹ ತಣಿಸಲು ಅಸಮರ್ಥವಾಗಿವೆ. ಕೃತಕ ತೊಟ್ಟಿಗಳನ್ನು ನಿರ್ಮಿಸಿ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ.

ಅರಣ್ಯದೊಳಗೆ ವಾಹನ ಸಂಚಾರದ ಕಿರಿಕಿರಿ ಮತ್ತು ಅವುಗಳ ಉಂಟು ಮಾಡುವ ವಾಯುಮಾಲಿನ್ಯ ದೊಡ್ಡ ಸಮಸ್ಯೆಯಾಗಿದೆ. ಇಲ್ಲಿ ಮಾಲ್ಧಾರಿ ಸಮುದಾಯದ ಜನರು ನೆಲೆಸಿರುವುದು ಮತ್ತು ಅವರ ಸ್ಥಳಾಂತರದ ಪ್ರಯತ್ನಗಳು ಹಲವು ಸಮಸ್ಯೆಗಳನ್ನು ಸೃಷ್ಟಿಸಿವೆ.

ಮಾಲ್ಧಾರಿಗಳು ವಾಸಿಸುವ ಸ್ಥಳವನ್ನು ನೆಸ್ ಎಂದು ಕರೆಯುತ್ತಾರೆ. ಮೊದಲು 129 ನೆಸ್‌ಗಳಲ್ಲಿ ಸುಮಾರು 845 ಸಂಸಾರಗಳಿದ್ದವು. 4802 ರಷ್ಟು ಜನರು ಮತ್ತು 16,842 ಜಾನುವಾರುಗಳಿದ್ದವು. 1972ರಲ್ಲಿ ಇವರನ್ನು ಕಾಡಿನಿಂದ ಹೊರಗೆ ಸ್ಥಳಾಂತರಿಸುವ ಕೆಲಸ ಶುರುವಾಯಿತು. ಆದರೆ ತೀವ್ರ ವಿರೋಧದಿಂದ ಅದು ಸ್ಥಗಿತಗೊಂಡಿದೆ. ಈಗ ಸುಮಾರು 54 ನೆಸ್‌ಗಳಿವೆ. ಮಾಲ್ಧಾರಿಗಳು ಸಾಕುವ ಜಾನುವಾರುಗಳಿಂದಾಗಿ ಕಾಡಿನ ಸಸ್ಯಾಹಾರಿ ಪ್ರಾಣಿಗಳ ಆಹಾರಕ್ಕೆ ತೊಂದರೆ ಉಂಟಾಗುತ್ತಿದೆ. ಈ ಸಾಕುಪ್ರಾಣಿಗಳನ್ನು ಬೇಟೆಯಾಡುವ ಸಿಂಹಗಳಿಂದಾಗಿ ಈ ಪ್ರದೇಶದಲ್ಲಿ ಮಾನವ– ಪ್ರಾಣಿ ಸಂಘರ್ಷವೂ ಸಮಸ್ಯೆಗಳನ್ನು ಹೆಚ್ಚಿಸಿವೆ. ಬ್ರಿಟಿಷರು ಬೇಟೆಗಾಗಿ ಆಫ್ರಿಕಾದಿಂದ ಕರೆತಂದ ಆಫ್ರಿಕಾದ ಮೂಲನಿವಾಸಿಗಳ ವಸತಿ ಸಮುಚ್ಚಯಗಳೂ ಇಲ್ಲಿವೆ. ಅವರೀಗ ಗುಜರಾತಿ ಭಾಷೆ ಕಲಿತು ಗುಜರಾತಿಗಳೇ ಆಗಿದ್ದಾರೆ.

ಕಾಡಿನಲ್ಲಿಯೇ ಕಬ್ಬಿನ ಗದ್ದೆಗಳಿವೆ. ಅಲ್ಲಿ ಚಿರತೆಗಳು ಮರಿ ಹಾಕುವುದರಿಂದ ಮಾನವ– ವನ್ಯಜೀವಿ ಸಂಘರ್ಷಗಳು ಇನ್ನಷ್ಟು ಹೆಚ್ಚಿವೆ. ಚಿರತೆಗಳನ್ನು ಕಾಣುವುದಕ್ಕೂ ಗಿರ್ ಪ್ರಶಸ್ತ ತಾಣ. ಇಲ್ಲಿ ಸುಮಾರು 375 ಚಿರತೆಗಳಿವೆ.

ಪ್ರಸ್ತುತ ಗಿರ್‌ನಲ್ಲಿ ಒಟ್ಟು 523 ಸಿಂಹಗಳಿವೆ. ಅದರಲ್ಲಿ 109 ಗಂಡು, 201 ಹೆಣ್ಣು ಮತ್ತು 213 ಮರಿಗಳು. ಪರಿಸರ ನಾಶ, ಪ್ರಾಣಿ–ಮಾನವ ಸಂಘರ್ಷ ಮತ್ತು ಕಳ್ಳ ಬೇಟೆಗಳ ಹೊರತಾಗಿಯೂ ಸಿಂಹಗಳ ಸಂಖ್ಯೆ ಸಾಕಷ್ಟು ಹೆಚ್ಚಿದೆ. ಆದರೆ ಈ ಸಿಂಹಗಳೆಲ್ಲ ಗಿರ್ ಅರಣ್ಯದಲ್ಲೇ ಕೇಂದ್ರೀಕೃತವಾಗಿರುವುದರಿಂದ ಅಕಸ್ಮಾತ್ ಸಾಂಕ್ರಾಮಿಕ ರೋಗಗಳು ಹರಡಿದರೆ ಅಪಾಯ ಕಟ್ಟಿಟ್ಟ ಬುತ್ತಿ. ಈ ಹಿನ್ನೆಲೆಯಲ್ಲೇ ಕೆಲವು ಸಿಂಹಗಳನ್ನು ಇಲ್ಲಿಂದ ಪಕ್ಕದ ಅರಣ್ಯಗಳಿಗೆ ಸ್ಥಳಾಂತರಿಸುವ ಪ್ರಸ್ತಾಪ ಬಂತು. ಆದರೆ ಗುಜರಾತ್ ಸರ್ಕಾರ ಈ ಪ್ರಸ್ತಾಪವನ್ನು ತೀವ್ರವಾಗಿ ವಿರೋಧಿಸಿತು. ಆದರೆ ಸುಪ್ರೀಂಕೋರ್ಟಿನ ಮಧ್ಯಪ್ರವೇಶದಿಂದ ಸ್ಥಳಾಂತರಕ್ಕೆ ಅನುಮತಿ ಸಿಕ್ಕಿತು. ಸಮೀಪದ ಪುಲ್ಪುರ್ ಕುನೋ ರಾಷ್ಟ್ರೀಯ ಉದ್ಯಾನಕ್ಕೆ ಕೆಲವು ಸಿಂಹಗಳನ್ನು ಸ್ಥಳಾಂತರಿಸುವ ಸುಪ್ರೀಂಕೋರ್ಟಿನ ಆದೇಶ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ.

ಸಿಂಹಗಳ ಸಂಖ್ಯೆಯ ಹೆಚ್ಚಿರುವುದು ಮತ್ತಷ್ಟು ಸಮಸ್ಯೆಗಳನ್ನು ಉಂಟು ಮಾಡುವ ಮುನ್ನವೇ ಅವುಗಳಿಗೆ ವಿಶಾಲ ಆವಾಸಸ್ಥಾನಗಳನ್ನು ಒದಗಿಸುವ ಕೆಲಸ ಸುಸೂತ್ರವಾಗಿ ನಡೆಯಬೇಕಿದೆ. ಅರಣ್ಯಗಳಲ್ಲಿ ಸಿಂಹಘರ್ಜನೆ ಹೆಚ್ಚಬೇಕಿದೆ. ಸಿಂಹಗಳ ದಿನಾಚರಣೆ ಕೇವಲ ಔಪಚಾರಿಕ ಆಚರಣೆಯಾಗದೆ, ಅವುಗಳ ವಂಶಾಭಿವೃದ್ಧಿ ಮತ್ತು ಪ್ರಕೃತಿ ಸಹಜ ಬದುಕಿಗೆ ಪೂರಕವಾದ ಕ್ರಮಗಳನ್ನೂ ಕೈಗೊಳ್ಳಬೇಕಾದ್ದು ಅವಶ್ಯಕ.